**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಹುಣಸೂರು**

**ಸಿ.ಸಿ.1837/2025**

| | | | |
|---|---|---|---|
| ಸಾಕ್ಷಿಯ ಹೆಸರು | ಶೃತಿ | ಪ್ರಾ ಸಾ | 01 |
| ತಂದೆ/ಗಂಡನ ಹೆಸರು | ಅರ್ಜುನ | ಚಾ ಸಾ | 01 |
| ವಯಸ್ಸು | 32 ವರ್ಷ | | |
| ವೃತ್ತಿ | ವ್ಯಾಪಾರ | | |
| ವಾಸಸ್ಥಳ | 1 ನೇ ಪಕ್ಷಿರಾಜುಪುರ | | |

**ಸಾಕ್ಷಿಗೆ ದಿನಾಂಕಃ 15.06.2026 ರಂದು ಪ್ರಮಾಣ ವಚನ ನೀಡಲಾಯಿತು**

**ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ**

ಆರೋಪಿ ನನ್ನ ಗಂಡ. ನನ್ನ ಹಾಗೂ ಆರೋಪಿತರ ನಡುವೆ ಬಾಯಿ ಮಾತಿನ ಜಗಳ ಆಗಿರುತ್ತದೆ. ಜಗಳದ ವಿಚಾರ ತಿಳಿಸಲು ಠಾಣೆಗೆ ಹೋದಾಗ ಪೊಲೀಸರು 3 ದಾಖಲೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಆರೋಪಿ ನನಗೆ ದೈಹಿಕ ಮಾನಸಿಕ ಹಿಂಸೆ ನೀಡಿಲ್ಲ. ಅವಾಚ್ಯಾ ಶಬ್ದಗಳಿಂದ ಬೈದಿಲ್ಲ, ಯಾವುದೇ ವಸ್ತುವಿನಿಂದ ಹಲ್ಲೆ ಮಾಡಿಲ್ಲ,

ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ 1 ಎಂದು ಗುರುತಿಸಲಾಯಿತು ಸಾಕ್ಷಿಯ ಸಹಿಯನ್ನು ನಿಪಿ1 ಎ ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸ್ಥಳ ಮಹಜರನ್ನು ನಿಪಿ 2 ಎಂದು ಗುರುತಿಸಲಾಯಿತು ಸಾಕ್ಷಿ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಅಮಾನತ್ತು ಮಹಜರನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸ್ಥಳ ಮಹಜರನ್ನು ನಿಪಿ 3 ಎಂದು ಗುರುತಿಸಲಾಯಿತು ಸಾಕ್ಷಿ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ನಿಪಿ 1 ರಿಂದ 3 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದರು, ನೀಡಲಾಯಿತು)**

**ಪಾಟೀಸವಾಲುಃ ಸ.ಸ.ಅ ರವರಿಂದ**

ಸುಮಾರು 12 ವರ್ಷಗಳ ಹಿಂದೆ 1 ಆರೋಪಿಯೊಂದದಿಗೆ ನನ್ನ ಮದುವೆ ಆಗಿತ್ತು ಎಂದರೆ ಸರಿ. ನನಗೆ ಆರೊಪಿಗೆ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ. ಸ್ವಲ್ಪ ದಿನಗಳ ಕಾಲ ನಾನು ಹಾಗೂ ಆರೊಪಿಗೆ ಅನೂನ್ಯವಾಗಿದ್ದೇವು ಎಂದರ ಸರಿ. ನಂತರ ನನ್ನ ಹಾಗೂ ಆರೊಪಿಯ ನುಡವೆ ಸಣ್ಣ ಪುಟ್ಟ ವಿಚಾರಕ್ಕೆ ಗಲಾಟೆ ಆಗುತ್ತಿತ್ತ ಎಂದರೆ ಸರಿಯಲ್ಲ. ಆರೋಪಿ ಪ್ರತಿದಿನ ಮದ್ಯಪಾನ ಮಾಡಿಕೊಡಯಿ ನನಗೆ ಹಲ್ಲೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾವರನ್ನು ಚಾಸಾ-7 ಮತ್ತು 8 ರವಗೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-7 ಮತ್ತು 8 ರವರು ನನಗೆ ಸಮಾದಾನ ಮಾಡಿ ಕಳುಹಿಸಿದರು ಎಂದರೆ ಸರಿಯಲ್ಲ. ಆರೋಪಿ ಆದರು ಸಹ ನನಗೆ ದೈಹಿಕ ಮಾನಸಿಕ ಹಿಂಸೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಹುಣಸಸೂರಿನ ಠಾಣೆಗ ದೂರು ನಿಡಿದ್ದೇನು ಆಗ ಪೋಲಿಸರುಚಮುಚ್ಚಳಿಕೆ ಬರೆಸಿ ಕಳುಹಿಸಿದ್ದ ಎಂದರೆ ಸರಿಯಲ್ಲ.

ಆದರು ಸಹ ಆರೋಪಿ ಪ್ರತಿ ದಿನ ನನ್ನ ಜೊತೆ ಜಗಳ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮಕ್ಕಳಿಗೆ ಹುಷಾರಿಲ್ಲದೆ ಇರುವಾಗ ಮಕ್ಕಳಿಗೆ ಯೊಗಕ್ಷೆಮ ಅರೋಪಿ ವಿಚಾರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ದಿಾನಂಕ 24.01.2025 ರಾ. 11.30 ಗಂಟೆ ಸಮಯದಲ್ಲಿ ಆರೋಪಿ ಕುಡಿದು ಬಂದು ಕಾರು ಕೀ ಕೊಡು ಎಂದು ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಕೈ ಯಲ್ಲಿ ಹಾಕಿದ್ದ ಕಬ್ಬಿಣದ ಬಳಯಿಂದ ನನ ತಲೆಗೆ ಹಾಗೂ ಬುಜಕ್ಕೆ ಹೊಡೆದು ನೋವು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-6 ರವರು ಬಂದು ಸಮಾದಾನ ಪಡಿಸಿರುತ್ತಾರೆ ಎಂದರೆ ಸರಿಯಲ್ಲ.ಆಗ ನನ್ನ ಬಳಿ ಇದ್ದ ಕಾರು ಹಾಗೂ ಬೈಕನ್ನು ಕಿತ್ತುಕೊಡಯಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಹುಣಸೂರಿನ ಅರ್ಕರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತೆನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಆರೋಪಿತರ ವಿರುದ್ಧ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿ.06.02.2025 ರಂದು ಪೋಲಿಸರ ಘಟನಾ ಸ್ಥಳ ಕ್ಕೆ ಬಂದಿದ್ದು ನಾನು ಸ್ಥಳದಲ್ಲಿ

ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ಚಾಸಾ 3 ಮತ್ತು 5 ರ ಸಮಕ್ಷಮ ಮ.12.00 ಗಂಟೆ ಇಂದ 12.30 ಗಂಟೆ ವರೆಗೆ ನಿಪಿ 2 ರಂತೆ ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಕಬ್ಬಿಣದ ಬಳೆಯನ್ನು ತೋರಿಸಿದ ಮೇರೆಗೆ ಚಾಸಾ 2 ಮತ್ತು 4 ರ ಸಮಕ್ಷಮ ನಿಪಿ 3 ರಂತೆ ಅಮಾನತ್ತು ಮಹಜರ್ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಮತ್ತು ಆರೋಪಿಗಳು ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಆ ಕಾರಣದಿಂದ ನಿಪಿ 1 ರಿಂದ 3 ರಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದರೂ ಸಹಾ ಆರೋಪಿಗಳಿಗೆ ಸಹಾಯವಾಗಲಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು ಆರೋಪಿ ಪರ ಇರುವುದಿಲ್ಲ.</u>**

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**